‘‘ಏನದು?’’

‘‘ದುಡ್ಡು...’’

‘‘ಕಾಣಿಸುತ್ತದೆ. ಸಾಲ ಮಾಡಿದ್ರಾ?’’

‘‘ನನಗೇಕೆ ಸಾಲ?’’

‘‘ಮತ್ತೆ ಇಷ್ಟೊಂದು ದುಡ್ಡು?’’

ಆತ ಒಲ್ಲದ ಮನಸ್ಸಿನಿಂದಲೇ ಹೇಳಿದ, ‘‘ನಾನು ಪೆನ್ ಡ್ರೈವ್‌ನಲ್ಲಿ ಅವರಿಗೆ ಕೊಟ್ಟಿದ್ದು ನಮ್ಮ ಬ್ಯಾಂಕ್‌ನ ಕಸ್ಟಮರ್‌ಗಳ ಡಾಟಾ. ಅವರ ಹೆಸರು, ಊರು, ಇತ್ಯಾದಿ ಇತ್ಯಾದಿ...’’

‘‘ಅವರೇನು ಮಾಡ್ತಾರೆ? ಬ್ಯಾಂಕ್ ಓಪನ್ ಮಾಡ್ತಾರಾ?’’

ರಂಜಿತ್‌ಗೆ ನಗು ತಡೆಯಲಾಗಲಿಲ್ಲ. ‘‘ಗುಗ್ಗು... ಅವರು ಇದರಲ್ಲಿನ ಫೋನ್ ನಂಬರ್ ಬಳಸಿಕೊಂಡು, ನಮ್ಮ ಬ್ಯಾಂಕ್‌ನವರಂತೆ ಮಾತನಾಡುತ್ತ, ಗ್ರಾಹಕರನ್ನು ನಂಬಿಸಿ, ಅವರಿಗೆ ಮೋಸ ಮಾಡಿ, ಬೇಕಾದಷ್ಟು ದುಡ್ಡು ಮಾಡಿಕೊಳ್ತಾರೆ. ನನಗೆ ಎರಡು ಲಕ್ಷ ಕೊಟ್ಟು ಕೋಟಿಗಟ್ಟಲೆ ಮಾಡಿಕೊಳ್ತಾರೆ...’’

‘‘ನಮಗಿದೆಲ್ಲ ಬೇಕಾ... ನಮಗೇನು ಕೊರತೆಯಾಗಿದೆ? ಬೇರೆಯವರಿಗೆ ಮೋಸ ಮಾಡಿ ಹಣ ಮಾಡ್ಬೇಕಾ?’’

‘‘ನಾನೇನೂ ಜನರಿಗೆ ಮೋಸ ಮಾಡ್ತಿಲ್ವಲ್ಲ. ನಾನು ಡಾಟಾ ನೀಡಿದ್ದೇನೆ ಅಷ್ಟೇ...’’

ಮಾತಿಗೆ ಮಾತು... ಜಗಳ... ಮಗಳು ರೇಖಾನೂ ತಂದೆಯ ಪರ... ನಾನು ಒಂಟಿ...

ಕೊನೆಯಲ್ಲಿ ರಂಜಿತ್ ಆಡಿದ ಮಾತು, ‘‘ನನ್ನ ದಾರಿ ನನಗೆ...’’

★★★

ಆಶ್ಚರ್ಯ! ಸುಮಾರು ಇಪ್ಪತ್ತು ದಿನಗಳಿಂದ ತರಕಾರಿ ಮಾರುಕಟ್ಟೆಯಲ್ಲಿ ರೀಟಾಳ ಸುಳಿವಿರಲಿಲ್ಲ. ಬಹುಶಃ ಆಕೆಯ ಗಂಡನಿಗೆ ಆಪರೇಷನ್ ಮಾಡಿಸುವ ಸಲುವಾಗಿ ಹೋಗಿರಬಹುದು. ಪಾಪ, ಬಹಳ ಕಷ್ಟಪಡುತ್ತಾಳೆ, ಪ್ರಾಮಾಣಿಕ ಹೆಣ್ಣು. ನಾನೂ ಆಪರೇಷನ್‌ಗೆ ಏನಾದರೂ ಸಹಾಯ ಮಾಡಬಹುದಿತ್ತು. ಆಕೆ ಕೇಳಲೇ ಇಲ್ಲ.

ಅನಿವಾರ್ಯವಾಗಿ ಬೇರೆ ತರಕಾರಿ ಅಂಗಡಿಗಳಿಂದ ಖರೀದಿ ನಡೆಸುತ್ತಿದ್ದ ನನಗೆ ಆ ಭಾನುವಾರ ಅವಳನ್ನು ಕಂಡು ಆನಂದ ತಡೆಯದಾಯಿತು. ನೇರವಾಗಿ ಆಕೆಯ ಬಳಿಗೆ ಹೋದೆ. ಆದರೆ ನನ್ನ ಊಹೆ ಸುಳ್ಳಾಗಿತ್ತು. ಆಕೆಯ ಪತಿ ಅಲ್ಲಿನ ಚೀಲದ ಮೇಲೆಯೇ, ಆಕೆಯ ಪಕ್ಕದಲ್ಲಿಯೇ ಕುಳಿತಿದ್ದ. ಯಾವುದೇ ಆಪರೇಷನ್‌ಗೆ ಆತ ಒಳಗಾಗಿದ್ದಂತೆ ಕಂಡುಬರಲಿಲ್ಲ. ಆಕೆಯನ್ನೇ ಕೇಳಿದೆ. ಆಕೆ ಹೇಳಿದ್ದಿಷ್ಟು...

‘‘ನನ್ನ ಬಾಬಾ (ತಂದೆ) ಹೋಗಿಬಿಟ್ಟರು ಅಕ್ಕಾ. ಕೊನೆಯ ಬಾರಿಗೆ ಆತನನ್ನು ನೋಡುವುದಕ್ಕೆ ಆಗಲೇ ಇಲ್ಲ. ಅಮ್ಮ ತುಂಬಾ ದುಃಖಪಟ್ಟಳು. ಅವರನ್ನು ಸಮಾಧಾನಪಡಿಸಿ ಬರುವಷ್ಟರಲ್ಲಿ ಇಷ್ಟು ದಿನವಾಯಿತು. ನಾನು ಓಡಿ ಹೋದ ಬಗ್ಗೆ ಅವರಿಗೆ ಹೆಚ್ಚು ದಿನ ಸಿಟ್ಟು ಇರಲಿಲ್ಲವಂತೆ; ನಾನು ಹೇಗಿದ್ದೀನೋ ಎಂದೇ ಸದಾ ಕನವರಿಸುತ್ತಿದ್ದರಂತೆ...’’

ಆಕೆಯ ಮಾತುಗಳನ್ನು ಕೇಳಿ ದುಃಖ ತಡೆಯದಾಯಿತು. ಬೇಸರದಿಂದಲೇ ಮನೆಗೆ ಬಂದೆ. ಬೀಗ ತೆರೆದು, ಒಳಗೆ ಬಂದೆ. ಸ್ಪರ್ಧಾತ್ಮಕ ಪರೀಕ್ಷೆಗೆ ಕೋಚಿಂಗ್ ತೆಗೆದುಕೊಳ್ಳಲು ಹೋದ ಮಗಳು ಬರುವ ಸಮಯ; ಇಷ್ಟೊತ್ತಿಗಾಗಲೇ ಬರಬೇಕಿತ್ತು...

ಡೈನಿಂಗ್ ಹಾಲ್‌ನ ಟೀಪಾಯಿಯ ಮೇಲೆ ಒಂದು ಪತ್ರವಿತ್ತು. ಪೇಪರ್ ವೇಯ್ಟ್ ಹೇರಲಾಗಿತ್ತು. ತೆಗೆದುಕೊಂಡು ಓದಿದೆ...